ಆರೋಪಿ ಪರ ವಕೀಲರು ಸಲ್ಲಿಸಿರುವ ದಂಡ ಪ್ರಕ್ರಿಯೆ ಸಂಹಿತೆ ಕಲಂ 311 ಸಹವಾಚಕ ಭಾರತೀಯ ನಾಗರಿಕ ಸುರಕ್ಷಾ ಣ ಸಂಹಿತೆ ಕಲಂ 348 ರ ಅರ್ಜಿಯ ಮೇಲಿನ ದಿನಾಂಕ 12.06.2025 ರ ಆದೇಶದ ಮೇರೆಗೆ ಸಾಕ್ಷಿಯನ್ನು ಈ ದಿನ ದಿನಾಂಕ 03.07.2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರವಾಗಿಃ ಶ್ರೀ ಪಿ ಜೆ ಜಿ (ಡಿ ಎಲ್ ಎಸ್ ಎ) ವಕೀಲರಿಂದಃ

**4.** ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿರುತ್ತೇನೆ. ಪೋಟೊಗ್ರಾಫಿ ಬಗ್ಗೆ ನಾನು ತರಬೇತಿ ಪಡೆದಿರುತ್ತೇನೆ. ಆದರೆ ಆ ಬಗ್ಗೆ ಯಾವುದೇ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ. ಆ ರೀತಿ ದಾಖಲೆ ಹಾಜರು ಪಡಿಸಲು ನನಗೆ ಯಾವುದೇ ರೀತಿಯ ತೊಂದರೆ ಇಲ್ಲ. ಡಿಜಿಟಲ್ ಕ್ಯಾಮರಾ ಅಥವಾ ಮೊಬೈಲನಲ್ಲಿ ಪೋಟೊ ತೆಗೆದರೆ, ಪೋಟೊದಲ್ಲಿ ಪೋಟೊ ತೆಗೆದ ದಿನಾಂಕ ಮತ್ತು ಸಮಯ ನಮೂದಾಗುತ್ತದೆ ಎಂದರೆ ಸರಿಯಲ್ಲ. ಆದರೆ ದಿನಾಂಕ ಮತ್ತು ಸಮಯವನ್ನು ನಾವು ಸೆಟ್ ಮಾಡಿದರೆ ಸಮಯ ಮತ್ತು ದಿನಾಂಕ ಪೋಟೊದಲ್ಲಿ ಬರುತ್ತದೆ. ಈ ಕೇಸಗೆ ಸಂಬಂಧಪಟ್ಟಂತೆ ನಾನು ಸುಮಾರು **15** ರಿಂದ **20** ಪೋಟೊಗಳನ್ನು ತೆಗೆದಿರುತ್ತೇನೆ. ಸದರಿ ಪೋಟೊಗಳಲ್ಲಿ ಪೋಟೊ ತೆಗೆದ ದಿನಾಂಕ ಮತ್ತು ಸಮಯ ನಮೂದಾಗಿಲ್ಲ ಎಂದರೆ ಸರಿ. ನಾನು ಪೋಟೊ ತೆಗೆದ ಪೋಟೊದ ಸಾಮರ್ಥ್ಯ ಎಷ್ಟು ಎಂದು ನನಗೆ ಗೊತ್ತಿಲ್ಲ. ಈ ಕೇಸಗೆ ಸಂಬಂಧಪಟ್ಟಂತೆ ಹಾಜರು ಪಡಿಸಿರುವ ನಿಪಿ-**33** ಪ್ರಮಾಣ ಪತ್ರದಲ್ಲಿ ಕ್ಯಾಮರಾದ ಸಾಮರ್ಥ್ಯವನ್ನು ನಮೂದಿಸಿಲ್ಲ ಎಂದರೆ ಸರಿ. ಕ್ಯಾಮರಾದ ಸಾಮರ್ಥ್ಯವನ್ನು ನಿಪಿ-**33** ರಲ್ಲಿ ನಮೂದು ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ.

**5.** ನಿಪಿ-**30** ಮತ್ತು ನಿಪಿ-**31** ಪೋಟೊಗಳನ್ನು ನಾನು ತೆಗೆದಿರುತ್ತೇನೆ ಎನ್ನುವ ಬಗ್ಗೆ ಸಂಬಂಧಪಟ್ಟ ರಶೀದಿಯನ್ನು ನಾನು ಪೋಲಿಸರಿಗೆ ನೀಡಿಲ್ಲ. ಆ ರೀತಿ ರಶೀದಿಯನ್ನು ಪೋಲಿಸರಿಗೆ ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಯಾವುದೇ ಸ್ಟುಡಿಯೋ ಇಲ್ಲ ಎಂದರೆ ಸರಿ. ಆದರೆ ನಾನು ಪೋಟೊಗ್ರಾಫರ್ ಆಗಿ ಕೆಲಸ ಮಾಡುತ್ತಿರಲಿಲ್ಲ ಮತ್ತು ನಿಪಿ-**30** ಮತ್ತು ನಿಪಿ-**31** ರಂತೆ ನಾನು ಯಾವುದೇ ಪೋಟೊಗಳನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರಿಗೆ ಸಹಾಯ ಮಾಡುವ ಉದ್ದೇಶದಿಂದ ಅವರ ಮಾತು ಕೇಳಿಕೊಂಡು ನಿಪಿ-**30** ಮತ್ತು ನಿಪಿ-**31** ರಂತೆ ಪೋಟೊಗಳನ್ನು ತೆಗೆದಿರುತ್ತೇನೆ ಮತ್ತು ನಿಪಿ-**33** ರಂತೆ ಪ್ರಮಾಣ ಪತ್ರ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.